**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 189/2019

ಹೆಚ್ಚುವರಿ ದೋಷಾರೋಪಣಾ ಪಟ್ಟಿ

ಸಾಕ್ಷಿ ಪಿಡಬ್ಲು : 19

| | |
|---|---|
| ಸಾಕ್ಷಿಯ ಹೆಸರು | : ಡಾ.. ವಿಜಯಲಕ್ಷ್ಮೀ |
| ತಂದೆಯ ಹೆಸರು | : ವಿಠೋಬಾ |
| ವಯಸ್ಸು | : 40 ವರ್ಷ |
| ಉದ್ಯೋಗ | : ಹಿರಿಯ ವೈಜ್ಞಾನಿಕ ಅಧಿಕಾರಿ ಡಿ. ಎನ್. ಎ. ವಿಭಾಗ ರಾಜ್ಯ ವಿಜ್ಞಾನ ಪ್ರಯೋಗಾಲಯ ಬೆಂಗಳೂರು |
| ವಾಸ್ತವ್ಯ | : ಬೆಂಗಳೂರು |
| ದಿನಾಂಕ | : 24-02-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(3 ನೇ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. 3 ನೇ ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ/ಗೌಪ್ಯ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**(ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ಬೆಂಗಳೂರಿನ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋಆರ್ಡಿನೇಟರ ಆಗಿ ಡಾ. ಸಕೀನಾ ರಜಾಕ್ ಸೈಂಟಿಫಿಕ್ ಆಫೀಸರ್ ಡಿ.ಎನ್.ಎ.ವಿಭಾಗ ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ**

**ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಲ್.ದೇವರಮನಿ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.**)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 19-06-2018 ರಿಂದ ಈ ದಿನದವರೆಗೆ ನಾನು ಬೆಂಗಳೂರಿನ ಮಡಿವಾಳದಲ್ಲಿರುವ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ವೈಜ್ಞಾನಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಮುಂಬಡ್ತಿ ಹೊಂದಿ ಹಿರಿಯ ವೈಜ್ಞಾನಿಕ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 09-05-2019 ರಂದು ನಿಪ್ಪಾಣಿ ಬಸವೇಶ್ವರ ಚೌಕ ಪೋಲಿಸ ಠಾಣೆ ಅಪರಾಧ ಸಂಖ್ಯೆ 15/2019 ಕ್ಕೆ ಸಂಬಂಧಿಸಿದಂತೆ 22 ಸೀಲಾದ ವಸ್ತುಗಳು ಮತ್ತು ಅದಕ್ಕೆ ಸಂಬಂಧಿಸಿದ ಕಡತಗಳನ್ನು ಪೋಲಿಸ ಪೇದೆ ನಂಬರ 2753 ಜಿ.ಎಸ್.ಕಲ್ಲಪ್ಪಗೋಳ ಎನ್ನುವವರು ನಮ್ಮ ಕಚೇರಿಯ ಸ್ವೀಕೃತಿ ವಿಭಾಗದಲ್ಲಿ ಸಲ್ಲಿಸಿದ್ದರು. ಸ್ವೀಕೃತಿ ವಿಭಾಗದವರು ವಸ್ತುಗಳನ್ನು ಸ್ವೀಕರಿಸಿ, ಡಿ.ಎನ್.ಎ. ನಂಬರ 292/2019 ಎಂದು ನೊಂದಣಿ ಮಾಡಿದ್ದರು.

3. ಅದೇ ದಿನ ಅಂದರೆ ದಿನಾಂಕಃ 09-05-2019 ರಂದು ಈ ಪ್ರಕರಣದ 22 ವಸ್ತುಗಳು ಮತ್ತು ಕಡತವನ್ನು ಉಪನಿರ್ದೇಶಕರು ಡಿ.ಎನ್.ಎ. ವಿಭಾಗ ಇವರು ವಿಶ್ಲೇಷಣೆಗಾಗಿ ನನಗೆ ನೀಡಿರುತ್ತಾರೆ. ನಾನು ಸದರಿ ವಸ್ತುಗಳನ್ನು ಸ್ವೀಕರಿಸಿದ್ದು ಮತ್ತು ಕಡತವನ್ನು ಸ್ವಿಕರಿಸಿ ನೋಡಲಾಗಿ, ವಸ್ತುಗಳ ಮೇಲೆ ಹಾಕಲಾಗಿದ್ದ ಸೀಲು ಸುಸ್ಥಿತಿಯಲ್ಲಿ ಇತ್ತು ಮತ್ತು ಮಾದರಿ ಸೀಲದೊಂದಿಗೆ ಹೊಂದಾಣಿಕೆ ಆಗುತ್ತಿತ್ತು.

4. ಸೀಲಾದ ವಸ್ತುಗಳನ್ನು ತೆರೆದು ನೋಡಿ ಅವುಗಳಿಗೆ ವಸ್ತು ಸಂಖ್ಯೆ 1 ರಿಂದ ವಸ್ತು ಸಂಖೆ 22 ಎಂದು ನಮೂದು ಮಾಡಿದ್ದೇನೆ.

1. ವಸ್ತು ಸಂಖ್ಯೆ 1– ಕಬ್ಬಿಣದ ಸುತ್ತಿಗೆ
2. ವಸ್ತು ಸಂಖ್ಯೆ 2 –ಮಾದರಿ ಮಣ್ಣು
3. ವಸ್ತು ಸಂಖ್ಯೆ 3– ರಕ್ತ ಬೆರೆತಿದ್ದ ಮಣ್ಣು
4. ವಸ್ತು ಸಂಖ್ಯೆ 4 –ಚಾಪೆ
5. ವಸ್ತು ಸಂಖ್ಯೆ 5– ಬಟ್ಟೆ
6. ವಸ್ತು ಸಂಖ್ಯೆ 6 –ಗಣಿಬ್ಯಾಗ
7. ವಸ್ತು ಸಂಖ್ಯೆ 7 –ಅಲ್ಯೂಮಿನಿಯಮ್ ಪ್ಲೇಟಿ
8. ವಸ್ತು ಸಂಖ್ಯೆ 8 –ಗಾಜೀನ ಬಿಯರ್ ಬಾಟಲ
9. ವಸ್ತು ಸಂಖ್ಯೆ 9 –ಶರ್ಟ
10. ವಸ್ತು ಸಂಖ್ಯೆ 10 – ಗಣಿ ಬ್ಯಾಗ
11. ವಸ್ತು ಸಂಖ್ಯೆ 11 –ಪ್ಯಾಂಟ್
12. ವಸ್ತು ಸಂಖ್ಯೆ 12– ಕಂಟ್ರೋಲ ಬ್ಯಾಸ
13. ವಸ್ತು ಸಂಖ್ಯೆ 13 –ಡಿಕ್ಕಿ ಲಾಕ ನಂಬರ 2 ಬಳಿಯಿಂದ ತೆಗೆದ ಸ್ವಾಬ್
14. ವಸ್ತು ಸಂಖ್ಯೆ 14– ಡಿಕ್ಕಿ ಲಾಕ ನಂಬರ 3 ರಿಂದ ತೆಗೆದ ಸ್ವಾಬ್
15. ವಸ್ತು ಸಂಖ್ಯೆ 15 –ಹಿಂಭಾಗದ ಬಂಪರ್ 4 ನಿಂದ ತೆಗೆದ ಸ್ವಾಬ್
16. ವಸ್ತು ಸಂಖ್ಯೆ 16– ಶರ್ಟು
17. ವಸ್ತು ಸಂಖ್ಯೆ 17– ಜಿನ್ಸ ಪ್ಯಾಂಟ್
18. ವಸ್ತು ಸಂಖ್ಯೆ 18– ಟಿ ಶರ್ಟ
19. ವಸ್ತು ಸಂಖ್ಯೆ 19 –ಬರಮೋಡಾ

20. ವಸ್ತು ಸಂಖ್ಯೆ 20– ಟಿ ಶರ್ಟ

21. ವಸ್ತು ಸಂಖ್ಯೆ 21 –ಜಿನ್ಸ ಪ್ಯಾಂಟ್

22. ವಸ್ತು ಸಂಖ್ಯೆ 22 –ಸೀಲಾದ ಇಡಿಟಿಎ ಟ್ಯೂಬ್ ಮತ್ತು ಸಾದಾ ಟ್ಯೂಬದಲ್ಲಿ ಅರವಿಂದ ಗೌರಿ ಶಂಕರ ಪೋಳ ರವರ ಮಾದರಿ ರಕ್ತ ಇತ್ತು .

5. ಈ ಎಲ್ಲಾ 22 ವಸ್ತುಗಳನ್ನು " H4661 ರಿಂದ H4684 " ಎಂದು ಕೋಡ ಮಾಡಿರುತ್ತೇವೆ. ಈ ಎಲ್ಲಾ ವಸ್ತುಗಳಿಂದ ಡಿ.ಎನ್.ಎ. ಬೇರ್ಪಡಿಸಿ ಪ್ರಮಾಣವನ್ನು ಪಡೆದು ಪಿ.ಸಿ.ಅರ್ ಪ್ರಕ್ರಿಯೇಗೆ ಒಳಪಡಿಸಿರುತ್ತೇನೆ. ಬಂದಂತಹ ಫಲಿತಾಂಶವನ್ನು ಜೆನೆಟಿಕ ಎನಾಲಾಯಿಜರ್ (Genetic Analyser) ಉಪಕರಣದ ಮುಖಾಂತರ ಡಿ.ಎನ್.ಎ. ಪ್ರೂಫಾಯಿಲಿಗೆ ಒಳಪಡಿಸಿರುತ್ತೇನೆ. ಬಂದಂತಹ ಫಲಿತಾಂಶವನ್ನು ನನ್ನ ವರದಿಯಲ್ಲಿ ನೀಡಿರುತ್ತೇನೆ.

1. ವಸ್ತು ಸಂಖ್ಯೆ 1 , ವಸ್ತು ಸಂಖ್ಯೆ 3 ರಿಂದ ವಸ್ತು ಸಂಖ್ಯೆ 11 ಮತ್ತು ವಸ್ತು ಸಂಖ್ಯೆ 13 ರಿಂದ ವಸ್ತು ಸಂಖ್ಯೆ 21 ರವರೆಗೆ ರಕ್ತದ ಅಂಶವಿದ್ದು, ಅದು ಮನುಷ್ಯ ರಕ್ತವಾಗಿರುತ್ತದೆ. ವಸ್ತು ಸಂಖ್ಯೆ 2 ಮತ್ತು ವಸ್ತು ಸಂಖ್ಯೆ 12 ರಲ್ಲಿ ರಕ್ತದ ಅಂಶ ಕಂಡು ಬಂದಿರುವುದಿಲ್ಲ. ವಸ್ತು ಸಂಖ್ಯೆ 1 ಮತ್ತು ವಸ್ತು ಸಂಖ್ಯೆ 21 ರಲ್ಲಿ ಕಂಡುಬಂದಂತಹ ರಕ್ತದ ಅಂಶದಲ್ಲಿನ ಡಿ.ಎನ್.ಎ. ಅಂಶಗಳು ವಸ್ತು ಸಂಖ್ಯೆ 22 ರಲ್ಲಿ ಕಳುಹಿಸಿದ ಅರವಿಂದ ಗೌರಿ ಶಂಕರ ಪೋಳ ರವರ ಮಾದರಿ ರಕ್ತದಲ್ಲಿರುವ ಡಿ.ಎನ್.ಎ. ಅಂಶಕ್ಕೂ ಹೊಂದಾಣಿಕೆ ಆಗುತ್ತಿರುತ್ತದೆ, ಆದ್ದರಿಂದ ಮೃತ ಅರವಿಂದ ಗೌರಿ ಶಂಕರ ಪೋಳ ಅವರನ್ನು ವಸ್ತು ಸಂಖ್ಯೆ 1 ಮತ್ತು ವಸ್ತು ಸಂಖ್ಯೆ 21 ರಲ್ಲಿರುವ ಅಂಶದಲ್ಲಿರುವ ರಕ್ತವು ಅವರದೇ ಆಗಿರುತ್ತದೆ ಎಂದು ನಾನು ವರದಿಯನ್ನು ನೀಡಿರುತ್ತೇನೆ. ವರದಿಯನ್ನು ನಿಪಿ–60 ಎಂದು ಗುರುತಿಸಲಾಯಿತು. ನಿಪಿ–60 ವರದಿಯು ಅನುಬಂಧ 1 ನ್ನು ಒಳಗೊಂಡಿರುತ್ತದೆ. ವರದಿಯ ಪ್ರತಿ ಪುಟದಲ್ಲಿ ನಾನು ಸಹಿಯನ್ನು ಮಾಡಿದ್ದೇನೆ. ಪ್ರತಿ ಪುಟದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ– 60(ಎ),

ನಿಪಿ–60(ಬಿ), ನಿಪಿ–60(ಸಿ), ನಿಪಿ–60(ಡಿ), ನಿಪಿ–60(ಇ) ಎಂದು , ಮಾದರಿ ಸೀಲನ್ನು ನಿಪಿ–61 ಎಂದು, ಸಾಕ್ಷಿಯ ಸಹಿಯನ್ನು ನಿಪಿ–61(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.